**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/23/ವಿ.ಮಾ.ಆ./2026-27

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ: 24-08-2026.

## ಸುತ್ತೋಲೆ

**ವಿಷಯ:** ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಕಾನೂನು ಕಾಲೇಜುಗಳು, ಸರ್ಕಾರಿ ಚಿತ್ರಕಲಾ ಕಾಲೇಜುಗಳು, ಸರ್ಕಾರಿ ಸಂಸ್ಕೃತ ಕಾಲೇಜುಗಳು ಹಾಗೂ ಅನುದಾನಿತ ಬಿ.ಎಡ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತೆ, ಸಾಂಸ್ಥಿಕ ಉತ್ತರದಾಯಿತ್ವ, ಹಾಗೂ ನಿಯಮಾನುಸರಣೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ಸೂಚನೆಗಳನ್ನು ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ:** **1)** ಉನ್ನತ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಇಡಿ 69 ಯುಪಿಸಿ 2024, (ಇ) ದಿ: 27-11-2025
**2)** ಕ್ರಿಮಿನಲ್ ಅಪೀಲು ಸಂಖ್ಯೆ: 2025ರ 1425ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿನಾಂಕ:15.01.2026,ರಂದು ಹೊರಡಿಸಿರುವ ಆದೇಶದಲ್ಲಿನ ನೀಡಿರುವ ನಿರ್ದೇಶನಗಳು
**3)** ಉನ್ನತ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಇಡಿ 66 VVD 2025, (ಇ) ದಿ: 01-08- 2026

*****

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಮಾನಸಿಕ ಆರೋಗ್ಯ ಸುರಕ್ಷತಾ ಕ್ರಮಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಹೊರಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ರಾಜ್ಯ ಸರ್ಕಾರ ಈಗಾಗಲೇ ಉಲ್ಲೇಖ (1) ರಂತೆ ಸುತ್ತೋಲೆಯನ್ನು ಹೊರಡಿಸಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಉಲ್ಲೇಖ(2)ರಲ್ಲಿ ಹೊರಡಿಸಿರುವ ಆದೇಶಗಳ ಪ್ಯಾರಾ (45)ಕ್ಕೆ ಅನುಸಾರವಾಗಿ ಉನ್ನತ ಶಿಕ್ಷಣ ಇಲಾಖೆಯಿಂದ ಹೊರಡಿಸಲಾದ ಉಲ್ಲೇಖ (3)ರ ಸುತ್ತೋಲೆಯ ಆಧಾರದ ಮೇಲೆ ಈ ಸುತ್ತೋಲೆಯನ್ನು ಹೊರಡಿಸಲಾಗುತ್ತಿದ್ದು, ಇದರಲ್ಲಿನ ಎಲ್ಲಾ ನಿರ್ದೇಶನಗಳನ್ನು ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಕಾನೂನು ಕಾಲೇಜುಗಳು, ಸರ್ಕಾರಿ ಚಿತ್ರಕಲಾ ಕಾಲೇಜುಗಳು, ಸರ್ಕಾರಿ ಸಂಸ್ಕೃತ ಕಾಲೇಜುಗಳು ಹಾಗೂ ಅನುದಾನಿತ ಬಿ.ಎಡ್ ಕಾಲೇಜುಗಳಲ್ಲಿ ಹಾಗೂ ಸಂಬಂಧಪಟ್ಟ ವಿದ್ಯಾರ್ಥಿನಿಲಯಗಳಲ್ಲಿ ಕಡ್ಡಾಯವಾಗಿ ಮತ್ತು ಅಕ್ಷರಶಃ ಅನುಸರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು ಮತ್ತು ಕಾಲೇಜುಗಳ ಪ್ರಾಂಶುಪಾಲರು ಅನುಸರಿಸಬೇಕಾದ ಮಾರ್ಗಸೂಚಿಗಳು ಈ ಕೆಳಕಂಡಂತಿವೆ.

**ಪ್ರಾಂಶುಪಾಲರ ಕರ್ತವ್ಯಗಳು:**

1. ಮೇಲೆ ಸೂಚಿಸಿರುವ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ (ಪ್ರತಿ ದಿವಸ ಕಾಲೇಜುಗಳ ತರಗತಿಗಳಲ್ಲಿ/ದೂರಶಿಕ್ಷಣ/ಆನ್‌ಲೈನ್ ಪದ್ಧತಿಯಲ್ಲಿ) ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ಅಥವಾ ಅಸ್ವಾಭಾವಿಕ ಮರಣ ಪ್ರಕರಣಗಳು ಕಾಲೇಜಿನ ಆವರಣದ ಒಳಗೆ ಅಥವಾ ಹೊರಗೆ, ವಿದ್ಯಾರ್ಥಿ ನಿಲಯ/ಪಿಜಿ ಗೃಹಗಳಲ್ಲಿ ಅಥವಾ ಬೇರೆ ಕಡೆಗಳಲ್ಲಿ ಸಂಭವಿಸಿದಲ್ಲಿ, ವಿಷಯ ತಿಳಿದ

ಕೂಡಲೇ, ತಡಮಾಡದೆ, ಆಡಳಿತಾತ್ಮಕ ವ್ಯಾಪ್ತಿಯಲ್ಲಿರುವ ಪೋಲಿಸ್ ಠಾಣೆಗಳಲ್ಲಿ ಪ್ರಥಮ ಮಾಹಿತಿ ವರದಿ (FIR) ಯನ್ನು ದಾಖಲಿಸತಕ್ಕದ್ದು.

2. ವಿದ್ಯಾರ್ಥಿಯ ಆತ್ಮಹತ್ಯೆ/ ಅಸ್ವಾಭಾವಿಕ ಮರಣ ಕಾಲೇಜಿನ ಅಥವಾ ವಿದ್ಯಾರ್ಥಿನಿಲಯದ ಆವರಣದೊಳಗೆ ಸಂಭವಿಸಿದ್ದಲ್ಲಿ ವಿದ್ಯಾರ್ಥಿಯ ಹಾಜರಾತಿ, ವಿದ್ಯಾರ್ಥಿಗೆ ಕಾಲೇಜು ದೊರಕಿಸಿಕೊಟ್ಟ ವೈದ್ಯಕೀಯ/ ಮಾನಸಿಕ ಬೆಂಬಲದ ವಿವರಗಳು, ವಿದ್ಯಾರ್ಥಿಯ ಶೈಕ್ಷಣಿಕ ಕಾರ್ಯಕ್ಷಮತೆಗೆ ಸಂಬಂಧಿಸಿದ ದಾಖಲೆಗಳು, ಪರೀಕ್ಷಾ ಫಲಿತಾಂಶ, ವಿದ್ಯಾರ್ಥಿಯ ವಿರುದ್ಧ ತೆಗೆದುಕೊಂಡಿರಬಹುದಾದ ಶಿಸ್ತುಕ್ರಮ, ಘಟನೆಯ ಕುರಿತು ದಾಖಲಿಸಿರುವ FIR ಕುರಿತ ಮಾಹಿತಿ ಹಾಗೂ ಸಿಸಿಟಿವಿ ಪುಟೇಜನ್ನು ಘಟನೆಯ ಎಲ್ಲಾ ವಿವರಗಳೊಂದಿಗೆ ಕೂಡಲೇ ಸಂಬಂಧಪಟ್ಟ ಜಂಟಿ ನಿರ್ದೇಶಕರ ಕಚೇರಿಗೆ ಹಾಗೂ ಕೇಂದ್ರ ಕಚೇರಿಯ ಇ-ಮೇಲ್: **(studentsafety.dce@gmail.com)** ಗೆ ಸಲ್ಲಿಸತಕ್ಕದ್ದು.

3. ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು ಜನವರಿ 2026ನೇ ಸಾಲಿನಿಂದ ಇಲ್ಲಿಯವರೆಗೆ ಜರುಗಿರಬಹುದಾದ ವಿದ್ಯಾರ್ಥಿಗಳ ಆತ್ಮಹತ್ಯೆ/ಅಸ್ವಾಭಾವಿಕ ಮರಣಗಳ ಕುರಿತ FIR ಅನ್ನು ಲಗತ್ತಿಸಿದ ತ್ರೈಮಾಸಿಕ ಮತ್ತು ವಾರ್ಷಿಕ ವರದಿಯನ್ನು **ಇ-ಮೇಲ್ (studentsafety.dce@gmail.com)** ಮೂಲಕ ದಿನಾಂಕ:31-08-2026 ರೊಳಗೆ ಇಲಾಖೆಗೆ ಸಲ್ಲಿಸತಕ್ಕದ್ದು.

| ಕ್ರ.ಸಂ | ಆತ್ಮಹತ್ಯೆ/ ಅಸ್ವಾಭಾವಿಕ ಮರಣಕ್ಕೆ ತುತ್ತಾದ ವಿದ್ಯಾರ್ಥಿಯ ಹೆಸರು, ಕೋರ್ಸ್, ತರಗತಿ ಮತ್ತು ಲಿಂಗ | ಆತ್ಮಹತ್ಯೆ/ ಅಸ್ವಾಭಾವಿಕ ಮರಣ ಸಂಭವಿಸಿದ ದಿನಾಂಕ, ಸಮಯ ಮತ್ತು ಸ್ಥಳ | ಪೋಲಿಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ (FIR) ದಾಖಲಿಸಿದ ದಿನಾಂಕ | FIR, ಪ್ರತಿ ಲಗತ್ತಿಸಲಾಗಿದೆಯೆ? | ಮರಣ ಕಾಲೇಜಿನ ಅಥವಾ ವಿದ್ಯಾರ್ಥಿನಿಲಯದ ಆವರಣದೊಳಗೆ ಸಂಭವಿಸಿದ್ದಲ್ಲಿ ಕ್ರ.ಸಂ.(2)ರಲ್ಲಿ ಸೂಚಿಸಿರುವ ಎಲ್ಲಾ ದಾಖಲೆಗಳನ್ನು ಈ ವರದಿಯೊಂದಿಗೆ ಲಗತ್ತಿಸಲಾಗಿದೆಯೆ? |
|---|---|---|---|---|---|
| | | | | | |
| | | | | | |

4. ಮೇಲೆ ಸೂಚಿಸಿರುವ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಿಂದ ಸುಮಾರು 1 ಕಿಮೀ ಸುತ್ತಳತೆಯಲ್ಲಿ ಮಾನ್ಯತೆ ಪಡೆದ ಆಸ್ಪತ್ರೆಗಳು/ ಚಿಕಿತ್ಸಾಲಯಗಳು ಇರುವುದನ್ನು ಖಚಿತಪಡಿಸಿಕೊಂಡು, ಈ ಆಸ್ಪತ್ರೆ/ ಚಿಕಿತ್ಸಾಲಯಗಳೊಂದಿಗೆ ಈ ಕೂಡಲೇ ಸಂಪರ್ಕ ಸಾಧಿಸಿ, ಅಗತ್ಯ ಕಂಡುಬಂದಲ್ಲಿ ಯಾವುದೇ ವಿಳಂಬವಿಲ್ಲದಂತೆ ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಈ ಆಸ್ಪತ್ರೆಗಳು/ ಚಿಕಿತ್ಸಾಲಯಗಳಿಂದ ಅಗತ್ಯ ವೈದ್ಯಕೀಯ ನೆರವು ದೊರಕಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.
5. ತಮ್ಮ ಕಾಲೇಜುಗಳಲ್ಲಿ ನೀಡಲಾಗುವ ಎಲ್ಲಾ ರೀತಿಯ ವಿದ್ಯಾರ್ಥಿವೇತನಗಳು ಕಾಲಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಗೆ ದೊರೆಯುವಂತೆ ಹಾಗೂ ವಿದ್ಯಾರ್ಥಿವೇತನದ ವಿತರಣೆಯಲ್ಲಿನ ವಿಳಂಬದಿಂದ ವಿದ್ಯಾರ್ಥಿಗಳಿಗೆ ದೈನಂದಿನ ಜೀವನದ ನಿರ್ವಹಣೆ/ಪರೀಕ್ಷಾ ಶುಲ್ಕ ನೀಡಿಕೆ ಇವೇ ಮೊದಲಾದ ವಿಷಯಗಳಲ್ಲಿ ಯಾವುದೇ ತೊಂದರೆ ಸಂಭವಿಸದಂತೆ ಸೂಕ್ತ ಕ್ರಮ ವಹಿಸತಕ್ಕದ್ದು. ಒಂದು ವೇಳೆ ಅನುದಾನದ ಕೊರತೆ ಅಥವಾ ತಾಂತ್ರಿಕ ತೊಂದರೆಗಳಿಂದ ವಿದ್ಯಾರ್ಥಿವೇತನವನ್ನು ವಿತರಿಸುವಲ್ಲಿ ವಿಳಂಬ ಉಂಟಾದಲ್ಲಿ ಈ ತೊಂದರೆಯನ್ನು ಲಿಖಿತ ರೂಪದಲ್ಲಿ ಇಲಾಖೆಯ ಗಮನಕ್ಕೆ ತಂದು ಪರಿಹಾರಕ್ಕಾಗಿ ಶೀಘ್ರ ಕ್ರಮ ಕೈಗೊಳ್ಳತಕ್ಕದ್ದು.
6. **ಯಾವುದೇ ಕಾರಣಕ್ಕಾಗಿಯೂ ಸರ್ಕಾರಿ ಮತ್ತು ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆ, ತರಗತಿಗಳು, ವಿದ್ಯಾರ್ಥಿನಿಲಯಗಳಿಗೆ ಸೇರಿಸದೆ ಇರುವುದು, ವಿದ್ಯಾರ್ಥಿವೇತನ ಸಕಾಲದಲ್ಲಿ ದೊರೆಯದೆ**

**ಶುಲ್ಕಪಾವತಿಯಲ್ಲಿ ಆಗಬಹುದಾದ ವಿಳಂಬದ ಕಾರಣಕ್ಕಾಗಿ, ಪದವಿ ಪ್ರಮಾಣಪತ್ರ ಅಥವಾ ಇತರ ಮುಖ್ಯ ಶೈಕ್ಷಣಿಕ ದಾಖಲೆಗಳನ್ನು ಹಿಡಿದಿಟ್ಟುಕೊಳ್ಳುವುದನ್ನು ಮಾಡುವಂತಿಲ್ಲ ಎನ್ನುವ ಅಂಶವನ್ನು ವಿಶೇಷವಾಗಿ ಗಮನಿಸಿ, ಕಟ್ಟುನಿಟ್ಟಾಗಿ ಜಾರಿಗೊಳಿಸುವುದು**. ಈ ನಿರ್ದೇಶನದ ಅನುಸರಣೆಗೆ ಸಂಬಂಧಪಟ್ಟಂತೆ ಎಲ್ಲಾ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು ತಮ್ಮ ಸಾಂಸ್ಥಿಕ ಯೋಜನೆಗಳಲ್ಲಿ ಸೂಕ್ತ ಮಾರ್ಪಾಡು ತರುವುದು.

7. ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಯುಜಿಸಿ ನಿಯಮಾನುಸಾರ ಕೆಳಕಂಡ ಹಾಗೂ ಇತರ ನಿಯಮಗಳು/ಮಾರ್ಗಸೂಚಿಗಳು ಅನುಸರಿಸಲ್ಪಡುತ್ತಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು:
   - ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ರಾಗಿಂಗ್ ಪಿಡುಗನ್ನು ತಡೆಗಟ್ಟಲು ಯುಜಿಸಿ ನಿಯಂತ್ರಣ ನಿಯಮಗಳು, 2009
   - ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆಯನ್ನು ಪ್ರೋತ್ಸಾಹಿಸುವ ಯುಜಿಸಿ ನಿಯಂತ್ರಣ ನಿಯಮಗಳು, 2012
   - ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಮಹಿಳಾ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವನ್ನು ತಪ್ಪಿಸಲು, ನಿಷೇಧಿಸಲು ಮತ್ತು ಪರಿಹರಿಸಲು ಯುಜಿಸಿಯ ನಿಯಂತ್ರಣ ನಿಯಮಗಳು, 2015
   - ವಿದ್ಯಾರ್ಥಿಗಳ ಕುಂದುಕೊರತೆಗಳ ಪರಿಹಾರದ ಕುರಿತು ಯುಜಿಸಿ ನಿಯಂತ್ರಣ ನಿಯಮಗಳು, 2023
   - ಯುಜಿಸಿ ಮತ್ತು ಇತರ ಆಡಳಿತ/ಶಾಸನಬದ್ಧ ಇಲಾಖೆಗಳು/ನಿಕಾಯಗಳಿಂದ ಹೊರಡಿಸಲಾಗುವ ಮತ್ತು ಅನ್ವಯಿಸುವ ಇತರ ಎಲ್ಲಾ ಕಾನೂನುಗಳು, ನಿಯಂತ್ರಕ ನಿಯಮಗಳು, ಮಾರ್ಗಸೂಚಿಗಳು ಮತ್ತು ನಿರ್ದೇಶನಗಳು
8. ತಮ್ಮ ಕಾಲೇಜಿನ ತ್ರೈಮಾಸಿಕ ಮತ್ತು ವಾರ್ಷಿಕ ವರದಿಗಳಲ್ಲಿ (1) ರಿಂದ (7) ರವರೆಗಿನ ಎಲ್ಲಾ ಕಾರ್ಯಾಂಶಗಳು ಸೇರ್ಪಡೆಗೊಂಡಿರುವುದನ್ನು ಖಚಿತಪಡಿಸಿಕೊಳ್ಳುವುದು.

**ಪ್ರಾದೇಶಿಕ ಜಂಟಿ ನಿರ್ದೇಶಕರ ಕರ್ತವ್ಯಗಳು:**

1. ಆಗಾಗ ತಪಾಸಣೆ ನಡೆಸುವ ಮೂಲಕ ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಮೇಲೆ ಸೂಚಿಸಿರುವ ಪ್ರಾಂಶುಪಾಲರ ಕರ್ತವ್ಯಗಳಲ್ಲಿ (1) ರಿಂದ (8) ರವರೆಗಿನ ಕಾರ್ಯಾಂಶಗಳು ಅಕ್ಷರಶಃ ಪಾಲಿಸಲ್ಪಡುತ್ತಿವೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳುವುದು.
2. ತಮ್ಮ ಕಚೇರಿ ವ್ಯಾಪ್ತಿಯ ಯಾವುದೇ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿವೇತನ ವಿತರಣೆಯಲ್ಲಿ ವಿಳಂಬವಾಗದಂತೆ ಕ್ರಮವಹಿಸುವುದು.
3. ವಿದ್ಯಾರ್ಥಿಯ ಆತ್ಮಹತ್ಯೆ/ ಅಸ್ವಾಭಾವಿಕ ಮರಣ ತಮ್ಮ ಕಚೇರಿ ವ್ಯಾಪ್ತಿಯ ಕಾಲೇಜುಗಳ ಅಥವಾ ವಿದ್ಯಾರ್ಥಿನಿಲಯಗಳ ಆವರಣದೊಳಗೆ ಸಂಭವಿಸಿದ್ದಲ್ಲಿ, ಕಾಲೇಜುಗಳು ಸಲ್ಲಿಸುವ ಎಲ್ಲಾ ದಾಖಲೆಗಳೊಂದಿಗೆ ಪ್ರಕರಣವನ್ನು ಕುರಿತ ಸುದೀರ್ಘ ಹಾಗೂ ಮಾಹಿತಿನಿಷ್ಠ ವರದಿಯನ್ನು ಕೂಡಲೇ ಇಲಾಖೆಗೆ ಸಲ್ಲಿಸತಕ್ಕದ್ದು.
4. ತಮ್ಮ ಕಚೇರಿ ವ್ಯಾಪ್ತಿಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳು ಸಲ್ಲಿಸುವ ತ್ರೈಮಾಸಿಕ ಮತ್ತು ವಾರ್ಷಿಕ ವರದಿಗಳನ್ನು ಕ್ರೋಢೀಕರಿಸಿ, ಇಲಾಖೆಗೆ ಇ-ಮೇಲ್:- **(studentsafety.dce@gmail.com)** ಮೂಲಕ ಸಲ್ಲಿಸುವುದು.

ಈ ಮೇಲಿನ ಕ್ರಮಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರು ಕ್ರಮವಹಿಸತಕ್ಕದ್ದು ಎಂದು ಈ ಮೂಲಕ ಸೂಚಿಸಲಾಗಿದೆ.

24/8/24

**ಕಾಲೇಜು ಶಿಕ್ಷಣ ನಿರ್ದೇಶಕರು**